**ಸಾಕ್ಷಿಯನ್ನು ದಿಃ 27.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

**ನಿ.ಆರ್-1** ಸಂಸ್ಥೆಯವರು ನೀಡಿರುವ ಅಧಿಕಾರ ಪತ್ರ

**ನಿ.ಆರ್-2** ವಿಮಾ ಪಾಲಿಸಿಯ ಯಥಾ ನಕಲು

**ನಿ.ಆರ್-3** ಸಿಸಿ 713/2023 ರ ಅಂತಿಮ ತೀರ್ಪು, ನಿ.ಪಿ-1 ರಿಂದ 19, ಪಿ.ಡಬ್ಲೂ-1 ರಿಂದ 9 ರವರೆಗಿನ ಸಾಕ್ಷ್ಯ ವಿಚಾರಗಳ ದೃಢೀಕೃತ ನಕಲು

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಅಪಘಾತದ ದಿನ ಲಾರಿಗೆ ನಂಬರ್ TN-57-AP-0847 ಗೆ ನಮ್ಮ ವಿಮೆ ಚಾಲ್ತಿಯಲ್ಲಿತ್ತು. ದೂರಿನ ಪ್ರಕಾರ ಮೃತರು ಚಲಾಯಿಸುತ್ತಿದ್ದ ಬೈಕ್ ಗೆ ನಮ್ಮ ವಿಮೆ ಇದ್ದ ಲಾರಿ ಹಿಂದಿನಿಂದ ಡಿಕ್ಕಿಪಡಿಸಿದೆ ಎಂದರೆ ಸರಿ, ಸಾಕ್ಷಿಯು ಮುಂದುವರಿದ ಗೂಡ್ಸ್ ಆಟೋ ಸಹ ಬಂದು ಡಿಕ್ಕಿಪಡಿಸಿರುವುದಾಗಿ ದೂರಿನಲ್ಲಿದೆ ಎನ್ನುತ್ತಾರೆ. ಗೂಡ್ಸ್ ಆಟೋ ಕೆ.ಆರ್.ನಗರದಿಂದ ಬರುತ್ತಿತ್ತು ಎಂದು ದೂರಿನಲ್ಲಿ ನಮೂದಿದೆ ಎಂದರೆ ಸರಿ. ದೂರಿನಲ್ಲಿ ರಸ್ತೆಯ ಮೇಲೆ ಬಿದ್ದಿದ್ದ ರಾಜುವಿನ ಮೋಟಾರ್ ಬೈಕ್ ಗೆ ಗೂಡ್ಸ್ ಆಟೋ ಡಿಕ್ಕಿಪಡಿಸಿರುವುದಾಗಿ ನಮೂದಿದೆ ಎಂದರೆ ಸರಿ.

ದೋಷಾರೋಪಣ ಪಟ್ಟಿಯ ಕಂಡಿಕೆ 17 ರಲ್ಲಿ ಲಾರಿ ಚಾಲಕ ಅತಿವೇಗವಾಗಿ ಚಲಾಯಿಸಿ ಮೃತರ ಬೈಕಿಗೆ ಡಿಕ್ಕಿಪಡಿಸಿ ಮೃತರು ಸ್ಥಳದಲ್ಲೆ ಮೃತಪಟ್ಟಿದ್ದು, ಲಾರಿ ಚಾಲಕ ಮಾಹಿತಿ ನೀಡದೇ ಚಿಕಿತ್ಸೆ ಕೊಡಿಸದೇ ಹೊರಟು ಹೋಗಿದ್ದಾರೆ ಎಂದು ನಮೂದಿದೆ ಎಂದರೆ ಸರಿ, ಸಾಕ್ಷಿಯು

ಮುಂದುವರಿದು ಉದ್ದೇಶಪೂರಕವಾಗಿ ಗೂಡ್ಸ ಆಟೋವನ್ನು ಸೇರಿಸಿಲ್ಲ ಎನ್ನುತ್ತಾರೆ. ತನಿಖೆಯ ನಂತರ ಗೂಡ್ಸ ಆಟೋದ ತಪ್ಪಿಲ್ಲದ ಕಾರಣ ಸೇರಿಸಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೆ ಲಾರಿ ಚಾಲಕನ ಅಜಾಗರೂಕತೆ ಹಾಗೂ ಸಂಪೂರ್ಣ ತಪ್ಪಿದ್ದು, ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನಾನು ಹೇಳಿದಂತೆ ಗೂಡ್ಸ್ ಆಟೋ ಚಾಲಕನದ್ದಾಗಲೀ, ಮೃತರದ್ದಾಗಲೀ ಯಾವುದೇ ತಪ್ಪಿಲ್ಲ ಎಂದರೆ ಸರಿಯಲ್ಲ.

ಗೂಡ್ಸ್ ಆಟೋ ಚಾಲಕನ ತಪ್ಪಿದೆ ಎಂದು ತೋರಿಸುವ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪೊಲೀಸ್ ದಾಖಲೆಗಳಲ್ಲಿದೆ ಎನ್ನುತ್ತಾರೆ. ಲಾರಿ ಚಾಲಕ ಹಾಗೂ ಮಾಲೀಕರನ್ನು ವಿಚಾರಿಸಿದ್ದು, ಅವರ ತಪ್ಪಿದೆ ಎಂದು ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**

**ಮತ್ತು ಎಂ.ಎ.ಸಿ.ಟಿ., ಮೈಸೂರು.**